IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಹಳಗನ್ನಡ ಕಾವ್ಯಗಳಲ್ಲಿ ನಿಸರ್ಗ

**ಡಾ.ಲಕ್ಷ್ಮೀನಾರಾಯಣ ಎ.ವಿ**
**ಸಹ ಪ್ರಾಧ್ಯಾಪಕರು**
**ಸ.ಪ್ರ.ದ.ಕಾ ಕೆಂಗೇರಿ**

ಆದಿಮಾನವನ ಬದುಕು ಪ್ರಾರಂಭವಾದದ್ದೆ ನಿಸರ್ಗದಿಂದ. ಕಾಡಿನ ಮಧ್ಯದಲ್ಲಿ ಹುಟ್ಟಿ ಬೆಳೆದ ನಮ್ಮ ಪೂರ್ವಜರು ಮೊದಲು ಹಸಿಮಾಂಸ, ಗಡ್ಡೆ ಗೆಣಸುಗಳನ್ನು ತಿನ್ನುತ್ತಿದ್ದರು. ನಂತರ ಬೆಂಕಿಯ ಆವಿಷ್ಕಾರದಿಂದ ಆಹಾರವನ್ನು ಬೇಯಿಸಿ ತಿನ್ನುವುದನ್ನು ಕಲಿತರು. ದೇಹಕ್ಕೆ ಮರದೆಲೆಗಳನ್ನೋ, ಪ್ರಾಣಿಗಳ ಚರ್ಮವನ್ನೋ ಸುತ್ತಿಕೊಳ್ಳುತ್ತಿದ್ದ ಮಾನವರು ನಂತರದಲ್ಲಿ ನೇಯ್ದು ತೊಡುವುದನ್ನು ಕಲಿತರು.

ಗಡ್ಡೆಗೆಣಸು ಮತ್ತು ಹಸಿಮಾಂಸ ತಿನ್ನುವುದು ಪ್ರಕೃತಿ ಸಹಜ ಸಂಸ್ಕೃತಿಯಾದರೆ ಮುಂದೆ ಬೇಯಿಸಿದ ಆಹಾರವನ್ನು ತಿನ್ನುವುದು ಅದೇ ಸಂಸ್ಕೃತಿ ವಿಕಾಸದ ಒಂದು ಹಂತ. ಹಾಗೆಯೇ ಮರದ ಎಲೆಗಳು ಅಥವಾ ಪ್ರಾಣಿಗಳ ಚರ್ಮವನ್ನು ದೇಹಕ್ಕೆ ಸುತ್ತಿಕೊಳ್ಳುವುದು ಪ್ರಕೃತಿ ಸಹಜ ಸಂಸ್ಕೃತಿಯಾದರೆ ಮುಂದೆ ಬಟ್ಟೆಯನ್ನು ನೇಯ್ದುತೊಡುವುದು ಸಂಸ್ಕೃತಿ ವಿಕಾಸದ ಮತ್ತೊಂದು ಹಂತ. ಹೀಗೆ ಪ್ರಕೃತಿಯೇ ಸಂಸ್ಕೃತಿಯಾಗಿ ಅನಂತರದ ಬೆಳವಣಿಗೆಗಳಿಂದ ಪ್ರತ್ಯೇಕ ಪರಿಕಲ್ಪನೆಯಾಗಿ ವಿಕಾಸ ಹೊಂದಿದೆ.

ಇಲ್ಲಿ ಹರ್ಸ್‌ಕೋವಿಟ್ಸ್ ಅವರು ಹೇಳಿರುವ ಅಣಟಣಾಡಿಜ ಽ ಣುಜ ತಿಚಿಥಿ ಠಜಿ ಟುಜಿಜ ಎಂಬ ವ್ಯಾಖ್ಯಾನವನ್ನು ಉಲ್ಲೇಖಿಸಬಹುದು.

ಪ್ರಕೃತಿಯೇ ಪ್ರಥಮ ಪರಿಸರ. ಪರಿಸರದ ಸಹಜ ಆಗುಹೋಗುಗಳೇ ಸಂಸ್ಕೃತಿಯ ಪ್ರಥಮ ಹಂತ. ಆನಂತರದಲ್ಲಿ ಮನುಷ್ಯರು ಇದೇ ಪರಿಸರದಲ್ಲಿ ತನ್ನ ಶ್ರಮಶಕ್ತಿ ಮತ್ತು ಬುದ್ಧಿಶಕ್ತಿಯಿಂದ ಮತ್ತೊಂದು ಪರಿಸರವನ್ನು ನಿರ್ಮಿಸಿಕೊಳ್ಳತೊಡಗುತ್ತಾರೆ. ಇದರಲ್ಲಿ ಆಹಾರವನ್ನು ಬೇಯಿಸುವ ಕ್ರಮದಿಂದ ಹಿಡಿದು ಉಡುಪಿನ ತಯಾರಿಕೆ, ಬೆಂಕಿಯ ಆವಿಷ್ಕಾರ, ಚಕ್ರದ ಸಂಶೋಧನೆ ಎಲ್ಲವೂ ಸೇರಿ ಮನುಷ್ಯ ನಿರ್ಮಿತ ನೆಲೆಗಳು ವಿಶಿಷ್ಟ ಜೀವನ ಪರಿಸರವನ್ನು ನಿರ್ಮಿಸುತ್ತವೆ. ಇದು ನಿಜವಾದ ಮನುಷ್ಯ ಸಂಸ್ಕೃತಿಯಾಗಿ ಬೆಳೆಯತೊಡಗುತ್ತದೆ.
“ಮನುಷ್ಯನು ಪ್ರಕೃತಿಯಿಂದ ಮೇಲ್ಮಟ್ಟಕ್ಕೆ ಬಂದಾಗ ಸಂಸ್ಕೃತಿ ಹುಟ್ಟಿತು.” ಎಂದು ಡಿ.ವಿ.ಗುಂಡಪ್ಪ ಅವರು ಹೇಳಿದ್ದಾರೆ. ಆದರೆ ಇಂಥ ಸಂಸ್ಕೃತಿಯ ಉಗಮಕ್ಕೆ ಮಾನವನ ಬುದ್ಧಿಶಕ್ತಿಯ ಬೆಳವಣಿಗೆಯ ಜೊತೆಗೆ ಶ್ರಮಶಕ್ತಿಯೂ ಕಾರಣ ವಾಯಿತು ಎಂದು ತಿಳಿಯಬಹುದು. ಮಾನವನಲ್ಲಿ ಇಂತಹ ಬುದ್ದಿಶಕ್ತಿ ಮತ್ತು ಶ್ರಮಶಕ್ತಿ ಮೊಳೆಯಲು ಕಾರಣ ಪ್ರಕೃತಿಯೇ ಆಗಿದೆ. ಇಂತಹ ಪ್ರಕೃತಿಯಲ್ಲಿ ಆದಿಮಾನವನು ಅಗೋಚರವಾದ ಶಕ್ತಿಯನ್ನು ಕಂಡು ಪೂಜಿಸಿರುವುದನ್ನು ಕಾಣುತ್ತೇವೆ.

"ಟೇಲರ್" ಅವರು ಪ್ರತಿಪಾದಿಸಿರುವ ಸರ್ವಚೇತನವಾದ ಅಥವಾ ಪ್ರಕೃತಿ ವಾದದಲ್ಲಿ ಜಗತ್ತಿನ ಸರ್ವ ವ್ಯಾಪಾರಗಳಲ್ಲಿ ಜಡತೆ ಇಲ್ಲ, ಎಲ್ಲಾ ಕಡೆಯೂ ಚೈತನ್ಯ ಹರಡಿದೆ. ಎಂದು ಹೇಳುತ್ತಾ ಸೂರ್ಯನ ಹುಟ್ಟುವಿಕೆ, ಗುಡುಗು, ಮಳೆ, ಮಿಂಚು, ಮರಗಿಡಗಳಿಂದ ಉತ್ಪನ್ನವಾದ ಹೂವು ಹಣ್ಣು ಇವುಗಳ ಹಿಂದೆ ಅಗೋಚರವಾದ ಶಕ್ತಿಯಿದೆ ಎಂದು ಹೇಳಿದ್ದಾನೆ.

ಇಂತಹ ಆಗೋಚರವಾದ ಶಕ್ತಿಯನ್ನು ಅರಿತಿದ್ದ ಆದಿಮಾನವನು ಸೂರ್ಯ, ಚಂದ್ರ, ಪ್ರಾಣಿ, ಪಕ್ಷಿ, ಮರ ಗಿಡ ಮುಂತಾದವುಗಳನ್ನು ದೈವವೆಂದು ತಿಳಿದು ಪೂಜಿಸುತ್ತಿದ್ದನು.
ಉದಾ: ತೋಡ ಜನಾಂಗದವರು 'ಕಯಾಜ್' ಮರವನ್ನು ಪವಿತ್ರ ವಾದುದೆಂದು ತಿಳಿದು ಪೂಜಿಸುವುದರ ಜೊತೆಗೆ ಆ ಮರದಿಂದ ತಯಾರಾದ ಬೆಂಕಿಕಡ್ಡಿಗಳನ್ನು ದೇವಸ್ಥಾನದಲ್ಲಿ ಮಾತ್ರ ಬೆಂಕಿಯ ಉತ್ಪಾದನೆಗಾಗಿ ಉಪಯೋಗಿಸುತ್ತಿದ್ದರು. ಇದರಿಂದ ಪ್ರಾಚೀನ ಕಾಲದಲ್ಲಿ ಪ್ರಕೃತಿಯನ್ನು ಮೂಲ ದೈವವನ್ನಾಗಿ ಮಾಡಿಕೊಂಡು ಆರಾಧಿಸುತ್ತಿದ್ದರು ಎಂಬುದನ್ನು ತಿಳಿಯಬಹುದಾಗಿದೆ.

ಮರದ ಕೆಳಗೆ ವಾಸ ಮಾಡುತ್ತಿದ್ದ ಮಾನವನು ಮಳೆ, ಮಿಂಚು, ಗುಡುಗು, ಬಿಸಿಲು ಮುಂತಾದವುಗಳಿಂದ ರಕ್ಷಣೆ ಪಡೆಯಲು ತನ್ನ ಬುದ್ಧಿ ಮತ್ತು ಶ್ರಮ ಶಕ್ತಿಯಿಂದ ಮನೆಯನ್ನು ನಿರ್ಮಿಸಿಕೊಳ್ಳಬೇಕಾಯಿತು. ಹೀಗೆ ಪ್ರಕೃತಿಯನ್ನು ತನಗೆ ಬೇಕಾದಂತೆ ಒಗ್ಗಿಸಿಕೊಳ್ಳಲು ಪ್ರಾರಂಭ ಮಾಡುತ್ತಾನೆ. ಹರಿಯುತ್ತಿರುವ ನದಿಗೆ ಅಡ್ಡವಾಗಿ ಒಂದು ಅಣೆಕಟ್ಟೆಯನ್ನು ನಿರ್ಮಿಸಿ ಅಲ್ಲಿ ನೀರು ನಿಲ್ಲುವಂತೆ ಮಾಡಿ ಆ ನೀರು ಕಾಲುವೆಗಳ ಮೂಲಕ ವ್ಯವಸಾಯಕ್ಕೆ ಉಪಯೋಗವಾಗುವಂತೆ ಮಾಡಿದುದು: ಇಲ್ಲಿ ಮನುಷ್ಯ ನಿಸರ್ಗದ ಜೊತೆ ಹೋರಾಟ ಮಾಡಿ ತನ್ನ ಬುದ್ಧಿ ಶಕ್ತಿ ಮತ್ತು ಶ್ರಮ ಶಕ್ತಿಯಿಂದ ಅಣೆಕಟ್ಟೆಯನ್ನು ನಿರ್ಮಿಸಿದುದು, ನಿಸರ್ಗದ ಜೊತೆ ಹೊಂದಾಣಿಕೆಯ ಜೊತೆಗೆ ಅಲಿಖಿತವಾದ ಒಪ್ಪಂದವನ್ನು ಮಾಡಿ ಕೊಂಡಂತೆ. ಹೀಗೆ ನಿಸರ್ಗದ ಜೊತೆಯಲ್ಲಿ ಮಾನವನು ನಿರಂತರವಾಗಿ ಹೋರಾಟ ಮತ್ತು ಹೊಂದಾಣಿಕೆಯನ್ನು ಮಾಡಿಕೊಂಡಿರುವುದನ್ನು ನಾವು ಕಾಣುತ್ತೇವೆ.

ನಿಸರ್ಗ ಎಂದ ತಕ್ಷಣ ನಮಗೆ ತಿಳಿಯುವುದು ನದಿ, ಪರ್ವತಗಳು, ಸೂರ್ಯ, ಚಂದ್ರ, ಸಾಗರ, ಸರೋವರಗಳು, ಇಂಪಾಗಿ ಗಾನ ಮಾಡುವ ಪಕ್ಷಿಗಳು, ಹೂವು ಮತ್ತು ಹಣ್ಣುಗಳನ್ನು ಬಿಡುವ ಮರಗಿಡಗಳು ಮತ್ತು ಹಚ್ಚ ಹಸುರಾಗಿರುವ ಕಾಡುಗಳು ಮುಂತಾದವುಗಳು. ಆದರೆ ನಿಸರ್ಗದ ಅರ್ಥ ವ್ಯಾಪ್ತಿಯನ್ನು ಇವಿಷ್ಟರಿಂದಲೇ ಸೀಮಿತಗೊಳಿಸಲು ಸಾಧ್ಯವಿಲ್ಲ. "ಮುಳ್ಳುಗಳಿಂದ ಕೂಡಿದ ಜಾಲಿಯ ಮರವೂ ಪ್ರಕೃತಿ, ಹಾಗೆಯೇ ಕಾಗೆ ಮತ್ತು ಗೂಬೆಯ ಧ್ವನಿಯು ಕರ್ಕಶವಾಗಿದ್ದರೂ ಕೂಡ ಅದು ಸಹಾ ಪ್ರಕೃತಿ" ಎಂಬ ವ್ಯಾಖ್ಯೆಯು ಪ್ರಕೃತಿಯ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತಾರಗೊಳಿಸುತ್ತದೆ.

ಒಟ್ಟಿನಲ್ಲಿ ನಿಸರ್ಗ ವರ್ಣನೆಯು ಪ್ರಾಚೀನ ಕಾಲದ ಸಾಹಿತ್ಯದಿಂದ ಹಿಡಿದು ಇಂದಿನ ಸಾಹಿತ್ಯದಲ್ಲೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಅದರಲ್ಲೂ ಪ್ರಾಚೀನ ಕನ್ನಡ ಸಾಹಿತ್ಯದ ಎಲ್ಲಾ ಕೃತಿಗಳಲ್ಲಿಯೂ ನಿಸರ್ಗದ ವರ್ಣನೆಯು ಬಂದಿರುವುದನ್ನು ಕಾಣುತ್ತೇವೆ. ಏಕೆಂದರೆ ಲಾಕ್ಷಣಿಕರ ಪ್ರಕಾರ ಯಾವುದೇ ಕೃತಿಯಲ್ಲಿ ಅಷ್ಟಾದಶವರ್ಣನೆಗಳು ಇರಲೇಬೇಕು, ಇಲ್ಲದಿದ್ದರೆ ಆ ಕೃತಿಯು ಮಹಾಕಾವ್ಯದ ಪಟ್ಟಕ್ಕೇರುತ್ತಿರಲಿಲ್ಲ. ಆದುದರಿಂದ ಪ್ರಾಚೀನ ಕವಿಗಳು ತಮ್ಮ ಕಾವ್ಯವಸ್ತುವಿಗೆ ನಿಸರ್ಗ ಸೌಂದರ್ಯದ ವರ್ಣನೆಯ ಅವಶ್ಯಕತೆ ಇಲ್ಲದಿದ್ದರೂ ಅಷ್ಟಾದಶವರ್ಣನೆಯ ನಿರ್ಬಂಧದಿಂದ ನಿಸರ್ಗವರ್ಣನೆಯೂ ಪ್ರಾಚೀನಕಾಲದ ಬಹುಪಾಲು ಕೃತಿಗಳಲ್ಲಿ ಬಂದಿರುವುದನ್ನು ಕಾಣುತ್ತೇವೆ.

ಅಷ್ಟಾದಶ ವರ್ಣನೆಗಳಲ್ಲಿ ಪ್ರಕೃತಿ ವರ್ಣನೆಗಳನ್ನು ಡಿ.ಎಲ್. ನರಸಿಂಹಾಚಾರ್ಯ ಅವರು ಈ ಕೆಳಕಂಡಂತೆ ವಿಂಗಡಿಸಿದ್ದಾರೆ.

1. ಋತು ವರ್ಣನೆ

- ❖ ವಸಂತ ಋತುವಿನ ವರ್ಣನೆ
- ❖ ಗ್ರೀಷ್ಮಋತು ವರ್ಣನೆ
- ❖ ವರ್ಷಾಕಾಲದ ವರ್ಣನೆ
- ❖ ಶರದೃತು ವರ್ಣನೆ
- ❖ ಹೇಮಂತ ಋತುವಿನ ವರ್ಣನೆ
- ❖ ಶಿಶಿರ ಋತುವಿನ ವರ್ಣನೆ

2. ಸಮುದ್ರದ ವರ್ಣನೆ
3. ಸೂರ್ಯನ ವರ್ಣನೆ
4. ಚಂದ್ರನ ವರ್ಣನೆ
5. ಪರ್ವತಗಳ ವರ್ಣನೆ
6. ನದಿ – ಕೆರೆಗಳ ವರ್ಣನೆ
7. ವನಸ್ಪತಿಗಳ ವರ್ಣನೆ'

ಮೇಲಿನ ವರ್ಣನೆಗಳೆಲ್ಲ ಪ್ರಾಚೀನ ಸಾಹಿತ್ಯದಲ್ಲಿ ಬಂದಿದ್ದರೂ ಕೂಡ ಪ್ರಕೃತಿಯ ಸೊಬಗನ್ನು ಸರಿಯಾಗಿ ಬಣ್ಣಿಸಲಿಲ್ಲ ಎಂದು ಕೆಲವರು ಅಭಿಪ್ರಾಯ ಪಟ್ಟಿರುವುದನ್ನು ಕಾಣಬಹುದು.

'ಅನೇಕ ವೇಳೆ ಕವಿ ಪ್ರಕೃತಿ ವರ್ಣನೆ ಮಾಡಲು ಅವನಿಗೆ ಪ್ರಕೃತಿಯನ್ನು ಕುರಿತ ತೃಷ್ಣೆಯಾಗಲಿ ಅನುಭವವಾಗಲಿ ಇರಲೇಬೇಕಾಗಿರಲಿಲ್ಲ. ಇಂತಹ ವರ್ಣನೆಯನ್ನು ಹೀಗೆ ಮಾಡಿದರೆ ತೀರಿತು ಎನ್ನುವ ಶಾಸ್ತ್ರ ಮರ್ಯಾದೆಯನ್ನು ಪಾಲಿಸಿದರೆ ಸಾಕು' ಎಂದು ಜಿ.ಎಸ್. ಶಿವರುದ್ರಪ್ಪನವರು ನಮ್ಮ ಹಳಗನ್ನಡ ಕವಿಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಮೇಲಿನಂತೆ ವ್ಯಾಖ್ಯಾನಿಸುತ್ತಾರೆ. 'ನಮ್ಮ ಹಿಂದಿನ ನಿಸರ್ಗ ಚಿತ್ರಣ ಒಂದು ರೀತಿಯ ಅಷ್ಟಾದಶ ವರ್ಣನೆಯ ಯಾಂತ್ರಿಕ ಅಂಗವಾಗಿ ಕವಿ ಸಮಯದ ಕ್ಲೀಷೆಯಾಗಿ ಬಂದಿದೆ." ಎಂದು ಸುಧಾಕರ ಅವರು ಹೇಳಿದ್ದಾರೆ. ಇವರ ಮಾತುಗಳು ನಿಜವಾಗಿದ್ದರೂ ಕೂಡ ಹಿಂದಿನ ಕವಿಗಳು ಲಾಕ್ಷಣಿಕರ ನಿರ್ಬಂಧವನ್ನು ಮೀರದೆ ನಿಸರ್ಗದ ಸೊಬಗನ್ನು ಹಿತಮಿತವಾಗಿ ಬಣ್ಣಿಸಿದ್ದಾರೆ. ತಮ್ಮ ಪ್ರತಿಭಾ ಶಕ್ತಿಯಿಂದ ಲಾಕ್ಷಣಿಕರ ನಿರ್ಬಧವನ್ನು ಮೀರಿ ಕಾವ್ಯ ಸೃಷ್ಟಿಯನ್ನು ಮಾಡಿದರೆ ಎಲ್ಲಿ ತಮ್ಮ ಕಾವ್ಯ ಮನ್ನಣೆ ಗಳಿಸದೆ ಹೋಗುವುದೋ ಎಂಬ ಭೀತಿ ನಮ್ಮ ಕವಿಗಳಿಗೆ ಉಂಟಾಗಿರಬೇಕು. ಆದರೂ ಇದಕ್ಕೆ ಅಪವಾದವೆಂಬಂತೆ ಪಂಪ, ಹರಿಹರ ಮುಂತಾದವರ ಕಾವ್ಯದಲ್ಲಿ ನಿಸರ್ಗದ ವರ್ಣನೆಯೂ ಸೊಗಸಾಗಿ ರಸೋಜ್ವಲವಾಗಿ ಬಂದಿರುವುದನ್ನು ನಾವು ಮನಗಾಣಬಹುದು.

ನಿಸರ್ಗ ಸೌಂದರ್ಯದ ವರ್ಣನೆ ಎಂದ ತಕ್ಷಣ ಡಿ.ಎಲ್. ನರಸಿಂಹಾಚಾರ್ಯ ಅವರು ಹೇಳಿರುವ ಎಲ್ಲಾ ವರ್ಣನೆಗಳನ್ನು ಬಣ್ಣಿಸಬೇಕು ಎಂದೇನೂ ಅಲ್ಲ ನಿಸರ್ಗ ಸೌಂದರ್ಯದ ವರ್ಣನೆ ಎಂದ ತಕ್ಷಣ ಕವಿಯಾದವನು ನಿಸರ್ಗವನ್ನು ಹೇಗೆ ನೋಡಿದ್ದಾನೆ ಹಾಗೆ ಆದರೆ ಸಂದರ್ಭಕ್ಕೆ ತಕ್ಕಂತೆ, ಕಾವ್ಯ ಸನ್ನಿವೇಶಕ್ಕೆ ತಕ್ಕಂತೆ ಆ ವರ್ಣನೆಗಳು ನೋಡಿದುದನ್ನು ತನ್ನ ಕಾವ್ಯದಲ್ಲಿ ಹೇಗೆ ಸಾಕ್ಷಾತ್ಕಾರಗೊಳಿಸಿದ್ದಾನೆ ಎಂಬುದನ್ನು ಮುಖ್ಯವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಇದನ್ನು ತಿಳಿದುಕೊಳ್ಳಲು ಪ್ರಾಚೀನ ಸಾಹಿತ್ಯದಲ್ಲಿ ನಿಸರ್ಗವರ್ಣನೆಯನ್ನು ಹೇಗೆ ಬಣ್ಣಿಸಲಾಗಿದೆ ಎಂಬುದನ್ನು ನೋಡಬೇಕು.

ಹಳಗನ್ನಡ ಸಾಹಿತ್ಯದಲ್ಲಿ ನಿಸರ್ಗ ವರ್ಣನೆಯು ಹಲವು ಸಲ ಹಿನ್ನೆಲೆಯಾಗಿ, ಹಲವು ಸಲ ಪಾತ್ರವಾಗಿ ಮತ್ತೆ ಕೆಲವು ಸಲ ಭಾವಸಂಬಂಧಿಯಾಗಿ ಬಂದಿರುವುದನ್ನು ಕಾಣುತ್ತೇವೆ. ಹೀಗೆ ಬಂದಿರುವ ನಿಸರ್ಗ ವರ್ಣನೆಯನ್ನು ಕೆಳಗಿನಂತೆ ವಿಭಾಗ ಮಾಡಿಕೊಂಡರೆ ನಿಸರ್ಗ ವರ್ಣನೆಯ ನೆಲೆಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

- ❖ ನಿಸರ್ಗದ ನೇರ ವರ್ಣನೆ.
- ❖ ನಿಸರ್ಗದ ಸಾಂದರ್ಭಿಕ ವರ್ಣನೆ.

ನಿಸರ್ಗದ ನೇರ ವರ್ಣನೆ :

ನಿಸರ್ಗದ ವ್ಯಾಪಾರಗಳನ್ನು ಕಂಡ ಕವಿ ಅದನ್ನು ಸಹಜವಾಗಿ ತನ್ನ ಕಾವ್ಯದಲ್ಲಿ ಹಲವು ಸಂದರ್ಭಗಳಲ್ಲಿ ತರುತ್ತಾನೆ. ಅಂದರೆ ಇದ್ದುದನ್ನು ಇದ್ದ ಹಾಗೆ ವರ್ಣಿಸುತ್ತಾನೆ. ಇದೇ ನಿಸರ್ಗದ ನೇರ ವರ್ಣನೆ.

ಉದಾ: ಸೂರ್ಯೋದಯವನ್ನು ಕಂಡ ಕವಿ ಅದರ ವರ್ಣನೆಯನ್ನು ಸ್ವಭಾವೋಕ್ತಿಯಂತೆ ಮಾಡುತ್ತಾನೆ. ಒಂದು ಹೂವನ್ನು ಕಂಡಾಗ ಅದರ ಚೆಲುವನ್ನಷ್ಟೆ ವರ್ಣಿಸುತ್ತಾನೆ. ಹೀಗೆ ಸಾಗರವನ್ನಾಗಲೀ, ನದಿಯನ್ನಾಗಲೀ ಅಥವಾ ನಿಸರ್ಗದ ಯಾವುದೇ ವಾಸ್ತವ ಘಟನೆಗಳನ್ನಾಗಲಿ ಕಂಡ ಕವಿಯು ಅದರ ನೈಜ ಚಿತ್ರಣವನ್ನು ಕೊಡುತ್ತಾನೆ. ಇಂತಹ ವರ್ಣನೆಗಳು ಹೆಚ್ಚು ಸ್ವಾಭಾವಿಕವಾಗಿರುತ್ತವೆ. ಇಲ್ಲಿ ಕವಿಗಳು ಕಲ್ಪನೆಗೆ ಮೊರೆಹೋಗುವುದಕ್ಕಿಂತ ಪ್ರಕೃತಿಯಲ್ಲಿನ ಸೌಂದರ್ಯವು ಮನಸ್ಸಿನ ಮೇಲೆ ಉಂಟು ಮಾಡುವ ಪರಿಣಾಮವನ್ನು ಚಿತ್ರಿಸಿರುವುದೇ ಹೆಚ್ಚು. ಅಂದರೆ ವಸ್ತುವಿನ ನೈಜ ಸೌಂದರ್ಯವೇ ಹೆಚ್ಚಾಗಿ ಕಂಡು ಬರುತ್ತದೆ. ಇಂಥ ನಿಸರ್ಗದ ನೇರ ವರ್ಣನೆಯು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಹೇಗೆ ಮೂಡಿ ಬಂದಿದೆ ಎಂಬುದನ್ನು ಸಂಕ್ಷಿಪ್ತವಾಗಿ ತಿಳಿದುಕೊಳ್ಳೋಣ.

ಕನ್ನಡ ಕಾವ್ಯಗಳಲ್ಲಿ ಋತುವರ್ಣನೆಯು ಹೆಚ್ಚಾಗಿ ಕಂಡು ಬಂದಿರುವುದನ್ನು ಕಾಣುತ್ತೇವೆ. ಹಳಗನ್ನಡ ಕವಿಗಳಲ್ಲಿ ಯಾರೂ ಕೂಡ ತಮ್ಮ ಕಾವ್ಯಗಳಲ್ಲಿ ಋತು ವರ್ಣನೆಯನ್ನು ಮಾಡದೆ ಬಿಟ್ಟಿಲ್ಲ. ಇಂತಹ ಋತು ವರ್ಣನೆಗಳಲ್ಲಿ ಮುಖ್ಯ ವಾದುದು ವಸಂತಋತು. ಏಕೆಂದರೆ ವಸಂತಋತುವು ಬಂದಿತೆಂದರೆ ಪ್ರಕೃತಿಯಲ್ಲಿ ಬದಲಾವಣೆಗಳುಂಟಾಗುತ್ತವೆ. ಅಂದರೆ ಮರಗಳು ಚಿಗುರುವುದು, ಹಿತವಾದ ಗಾಳಿಯು ಬೀಸುವುದು, ಕೋಗಿಲೆಯ ಇಂಪಾದಗಾನ ಮುಂತಾದವುಗಳನ್ನು ಕಂಡ ಕವಿಯು ಅವುಗಳನ್ನು ತನ್ನ ಕಾವ್ಯಗಳಲ್ಲಿ ಔಚಿತ್ಯಪೂರ್ಣವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ.

'ಪಂಪನ ಆದಿಪುರಾಣ' ದಲ್ಲಿ ಭರತನು ದಿಗ್ವಿಜಯ ಹೊರಟು ಗಂಗಾ ನದಿಯ ತಡಿಯಲ್ಲಿರುವ ವನದಲ್ಲಿ ಅಂತಃಪುರದ ಸ್ತ್ರೀಯರೊಡನೆ ವಿಹರಿಸುತ್ತಿರುವ ಸಂದರ್ಭದಲ್ಲಿ ಕವಿಯು ಆ ವನದ ಪೂರ್ಣ ವರ್ಣನೆಯನ್ನು ಮಾಡಿದ್ದಾನೆ. ಅದರಲ್ಲೂ ಮಾವಿನ ಮರದ ವರ್ಣನೆಯನ್ನು ಅಂತಃಪುರದ ಸ್ತ್ರೀಯರ ಮೂಲಕ ಹೀಗೆ ಬಣ್ಣಿಸಿದ್ದಾನೆ:

"ತಳಿರೊಳ್ ನೀನೆ ಬೆಡಗನ್ಯೆ ನನೆಗಳೊಳ್ ನೀಂ ನೀರನ್ಯೆ ಪುಷ್ಪಸಂ
ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀಂ ಚಲ್ವನ್ಯೆ ಪಣ್ತಪ
ಣ್ಗಳಿನೋವೋ ಪೆರಿತೇನೋ ನೀನೆ ಭುವನಕ್ಕಾರಾಧ್ಯನ್ಯೆ ಭೃಂಗ ಕೋ
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ" [1]

ಮಾವಿನ ಮರವನ್ನು ಬಗೆ ಬಗೆಯಾಗಿ ವರ್ಣಿಸಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಇಲ್ಲಿ ಕವಿಯ ಕಲ್ಪನೆಗಿಂತ ವಸ್ತುವಿನ ಸೌಂದರ್ಯ ಪ್ರಮುಖ ವಾಗಿರುವುದು ಅದರ ನೇರ ವರ್ಣನೆಯಿಂದ, ಹೀಗೆ ಪಂಪನ ಮನಸ್ಸು ವಸಂತ ಋತುವಿನಲ್ಲಿರುವ ಮಾವಿನ ಮರದ ಸೌಂದರ್ಯಕ್ಕೆ ಸೂರೆಗೊಂಡಿರುವುದನ್ನು ಕಾಣುತ್ತೇವೆ.

'ವಿಕ್ರಮಾರ್ಜುನ' ವಿಜಯದಲ್ಲಿ ಅರ್ಜುನನು ದಕ್ಷಿಣ ಭಾರತದ ಮೇಲೆ ದಿಗ್ವಿಜಯಕ್ಕೆ ಬಂದಾಗ ಪಂಪ ಅವನ ಮೂಲಕ ಬನವಾಸಿಯು ವಸಂತ ಋತುವಿನಲ್ಲಿ ಹೇಗೆ ಕಾಣಿಸುತ್ತಿದೆ. ಅದರ ವೈಭವವೇನು ಎಂಬುದನ್ನು ನೇರ ವರ್ಣನೆಯ ಮೂಲಕ ಈ ಕೆಳಗಿನ ಪದ್ಯದಲ್ಲಿ ಹೀಗೆ ವರ್ಣಿಸಿದ್ದಾನೆ.

"ಸೊಗಯಿಸಿಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ ನೋಳ್ಪೊಡಾವ ಬೆ

ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೋಳ್"[2]

ಇಲ್ಲಿ ಬಂದಿರುವ ಮಾವಿನ ಮರದ ಸೊಬಗು, ಸಂಪಿಗೆ ಹೂವಿನ ಸೌಂದರ್ಯ, ಕೋಗಿಲೆಯ ಇಂಪಾದ ಗಾನ ಮತ್ತು ದುಂಬಿಯ ಝೇಂಕಾರ ಇವುಗಳು ವಸಂತ ಋತುವಿನ ಸೌಂದರ್ಯವನ್ನು ಸೂಸುತ್ತವೆ. ಇಲ್ಲಿ ಪಂಪ ಮಾಡಿರುವ ವರ್ಣನೆಗಳು ಬನವಾಸಿಗೆ ವಸಂತಋತು ಕಾಲಿಟ್ಟಾಗ ಹೇಗೆ ಕಾಣಿಸುತಿತ್ತು ಎಂಬುದರ ವಾಸ್ತವ ಘಟನೆಯನ್ನು ಇಲ್ಲಿ ಚಿತ್ರಿಸಿರುವುದನ್ನು ಕಾಣುತ್ತೇವೆ. ವಾಸ್ತವ ಚಿತ್ರಣಗಳಿಂದಲೇ ಬನವಾಸಿಯನ್ನು ವೈಭವೀಕರಿಸಿರುವುದರಲ್ಲಿ ಪಂಪನ ಪ್ರತಿಭೆ ಹೆಚ್ಚು ಕೆಲಸ ಮಾಡಿದೆ.

ಪಾರ್ವತಿಯು ಶಿವನ ಧ್ಯಾನದಲ್ಲಿ ತಪಸ್ಸು ಮಾಡುತ್ತಿರುವಾಗ ಆ ತಪಸ್ಸಿಗೆ ಅಡ್ಡಿಯುಂಟುಮಾಡಲೋ ಎಂಬಂತೆ ಪ್ರಕೃತಿಯಲ್ಲಿ ವರುಣ ಮತ್ತು ಇಂದ್ರ ಇವರುಗಳು ಬಿರುಗಾಳಿ ಮತ್ತು ಭಯಂಕರವಾದ ಮಳೆಯನ್ನು ಸುರಿಸುತ್ತಾರೆ. ಆದರೂ ಆಕೆ ಬಿರುಗಾಳಿಗಾಗಲಿ ಮಳೆಗಾಗಲಿ ಹೆದರದೆ ಬೆದರದೆ ತಪಸ್ಸನ್ನು ಮುಂದುವರೆಸುತ್ತಾಳೆ. ಇಲ್ಲಿ 'ಹರಿಹರ' ಆ ಮಳೆಯ ವರ್ಣನೆಯನ್ನು ಹೀಗೆ ಮಾಡಿದ್ದಾನೆ.

"ಓತ್ತರಿಸುತ್ತಂಬರಮಂ
ಮುತ್ತುತುಂ ದಿಗ್ವಿತಾನಮಂ ಧರೆಯೊಳ್ ತೀ
ವುತ್ತುಂ ಕತ್ತಲಿಸುತ್ತಂ
ಸುತ್ತು ಜಿನುಗಿದವು ಸೊನೆ ಇರುಳಂ ಪಗಲುಂ" [3]

ಇಲ್ಲಿ ಮುಂಗಾರಿನ ಮಳೆಯ ವರ್ಣನೆಯನ್ನು ಮಾಡಿದಂತೆ ನಮಗೆ ಗೋಚರವಾಗುತ್ತದೆ. ಹೇಗೆಂದರೆ ಮುಂಗಾರಿನ ಮಳೆಯ ಆರ್ಭಟ, ಆಕ್ರೋಶಗಳು ಇಲ್ಲಿ ಕಾಣುತ್ತವೆ. ಮೋಡಗಳು ಆಕಾಶದ ತುಂಬಾ ಆವರಿಸಿದಾಗ ಭೂಮಿಯಲ್ಲಿ ಕತ್ತಲೆಯು ತುಂಬಿಕೊಳ್ಳುತ್ತದೆ. ಇಂತಹ ಸಮಯದಲ್ಲಿ ಮೋಡಗಳ ಘರ್ಷಣೆಯಿಂದ ಭಯಂಕರವಾದ ಮಳೆಯು ಧಾರಾಕಾರವಾಗಿ ಸುರಿಯುತ್ತದೆ. ಇಂತಹ ನಿಸರ್ಗದ ವಾಸ್ತವ ಘಟನೆಯ ಚಿತ್ರಣವನ್ನು ಹರಿಹರ ಇಲ್ಲಿ ವರ್ಣಿಸಿರುವುದನ್ನು ನಾವು ಕಾಣಬಹುದಾಗಿದೆ.

ಲಕ್ಷ್ಮೀಶನ 'ಜೈಮಿನಿ ಭಾರತ'ದಲ್ಲಿ ಲಕ್ಷ್ಮಣನು ತನ್ನ ಅಣ್ಣನಾದ ರಾಘವನ ಮಾತಿನಂತೆ ಸೀತೆಯನ್ನು ಕಾಡಿನಲ್ಲಿ ಬಿಟ್ಟ ಸಂದರ್ಭದಲ್ಲಿ ಗಂಗಾನದಿಯು ಸೀತೆಗೆ ಹೀಗೆ ಕಾಣಿಸಿದೆ.

"ತೆರೆತೆರೆದ ಕಲ್ಲೋಲಮಾಲೆಗಳ ಲೀಲೆಗಳ
ಬೆರೆಬೆರೆವ ರಾಜಹಂಸಾಳಿಗಳ ಕೇಳಿಗಳ
ಪರಿಪರಿಯ ನೀರ್ವನಿಗಳಾಕರದ ಶೀಕರದ ನೊರೆಯ ಬೊಬ್ಬುಳಿಯ ಸುಳಿಯ
ಮೊರೆ ಮೊರೆದು ಭೂರ್ಮಿಸುವ ಪರಿವುಗಳ ಮುರಿವುಗಳ
ತಿರುತಿರುಗಿ ಸುಳಿವ ಜಲಜಂತುಗಳ ಗೊಂತುಗಳ
ನೆರನೆರದು ಮುನಿಜನಂ ಸೇವಿಸುವ ಭಾವಿಸುವ ಗಂಗೆಗವನಿಜೆ ಬಂದಳು" [4]

ಇಲ್ಲಿ ಬಂದಿರುವ ತೆರೆತೆರೆದ, ಬೆರೆಬೆರೆವ, ಪರಿಪರಿವ, ಮೊರೆಮೊರೆದು, ತಿರು ತಿರುಗಿ ಹಾಗೂ ನೆರೆನೆರೆದು ಇಂತಹ ಶಬ್ದಗಳು ಗಂಗೆಯ ಜುಳುಜುಳು ನಾದವೆ ಕಿವಿಗೆ ಬೀಳುತ್ತಿರುವಂತೆ ಭಾಸವಾಗುವುದರಲ್ಲಿ ವಾಸ್ತವಾಂಶದ ನೆಲೆಯನ್ನು ಕಾಣುತ್ತೇವೆಯೆ ಹೊರತು ಕಲ್ಪನೆಯನ್ನಲ್ಲ.

ಇದೇ ರೀತಿ ರತ್ನಾಕರವರ್ಣಿಯ 'ಭರತೇಶವೈಭವ' ದಲ್ಲಿ ಸಾಗರದ ಯಥಾವತ್ತಾದ ಚಿತ್ರಣವು ಮೂಡಿಬಂದಿದೆ. ಭರತನ ಆಸ್ಥಾನದಲ್ಲಿ ಚಕ್ರರತ್ನವು ಉದಯಿಸಿದುದರಿಂದ ಭರತನು ಆ ಚಕ್ರರತ್ನವು ದಾರಿ ತೋರಿಸಿದ ಕಡೆಗೆ ತನ್ನ ಪರಿವಾರ ಮತ್ತು ಸೈನ್ಯಸಮೇತ ದಿಗ್ವಿಜಯಹೊರಟ. ಇವನು ಪಯಣದ ಮೇಲೆ ಪಯಣ ಬೆಳೆಸಿ ಪೂರ್ವ ಸಾಗರದ ಬಳಿ ಬೀಡು ಬಿಟ್ಟಿರುತ್ತಾನೆ. ಇಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಭರತನ ಕಾಂತೆಯರಿಗೆ ಸಮುದ್ರವು ಹೀಗೆ ಕಾಣಿಸುತ್ತದೆ.

"ಅಟ್ಟುವ ತೆರೆಯ ಮುಂದೋಡುವ ತೆರೆಯ ಪೆ
ರ್ಚಿಟ್ಟದಂತೇಳ್ವ ತೆರೆಗಳ ತೊಟ್ಟನೆ ಬಯಲಹ ತೆರೆಗಳನವರು ಕ
ಣ್ಣಿಟ್ಟು ನೋಡಿದರರ್ತಿವಡುತ
ತುಂತುರು ತೆರೆ ನೊರೆ ಸುಳಿ ಘುಳು ಘುಳುರವ
ತೊಂತಿಟ್ಟು ಹೊಳೆವ ವಾರಿಧಿಯ ಕಾಂತೆಯರೀಕ್ಷಿಸಿದರು."!! [5]

ಸಾಗರದಲ್ಲಿ ಉಂಟಾಗುವ ಅಲೆಗಳ ಅಬ್ಬರ, ಕಣ್ಣಿಗೆ ನಿಲುಕುವಷ್ಟರವರೆಗೆ ಕಾಣುವ ನೀರು ಮುಂತಾದುವುಗಳನ್ನು ನೇರವಾಗಿ ವಸ್ತು ಸ್ಥಿತಿಗನುಗುಣವಾಗಿ ಚಿತ್ರಿಸಿದ್ದಾರೆ. ಹೀಗೆ ಹಳಗನ್ನಡ ಕಾವ್ಯಗಳಲ್ಲಿ ನಿಸರ್ಗದ ನೇರ ವರ್ಣನೆಯು ಮೂಡಿಬಂದಿರುವುದು ಕಾವ್ಯದ ಸೌಂದರ್ಯವನ್ನು ಹೆಚ್ಚಿಸಿದೆ.

**ಅಡಿ ಟಿಪ್ಪಣಿಗಳು**

1. ಆದಿ ಪುರಾಣ, ಕನ್ನಡ ಸಾಹಿತ್ಯ ಪರಿಷತ್, ಪುಟ: 452
2. ವಿಕ್ರಮಾರ್ಜುನ ವಿಜಯ, ಕನ್ನಡ ಸಾಹಿತ್ಯ ಪರಿಷತ್, ಪುಟ: 98
3. ಗಿರಿಜಾ ಕಲ್ಯಾಣ, ಕನ್ನಡ ಸಾಹಿತ್ಯ ಪರಿಷತ್, ಪುಟ: 243
4. ಜೈಮಿನಿ ಭಾರತ, ಕನ್ನಡ ಸಾಹಿತ್ಯ ಪರಿಷತ್ ಪುಟ: 214
5. ಭರತೇಶ ವೈಭವ, ಕನ್ನಡ ಸಾಹಿತ್ಯ ಪರಿಷತ್, ಪುಟ: 265

IJCRT